ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **106/2025**

ಸಿ ಡಬ್ಲ್ಯೂಃ-**5** /ಪಿ ಡಬ್ಲ್ಯೂ ಃ-**5**

ಸಾಕ್ಷಿದಾರರ ಹೆಸರು ಃ ರಾಘವೇಂದ್ರ
ತಂದೆಯ ಹೆಸರು ಃ ಕೃಷ್ಣಮೂರ್ತಿ
ವಯಸ್ಸು ಃ **46** ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಚಿಕ್ಕಗ್ರಹಾರ

ದಿನಾಂಕಃ **24-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 1 ರಿಂದ 4 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ನಿಪಿ 13 ನ್ನು ತೋರಿಸಲಾಗಿ ನಿಪಿ 13 ರಲ್ಲಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ 13 (ಸಿ) ಎಂದು ಗುರುತಿಸಲಾಯಿತು. ನಿಪಿ 13 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 14 ರಿಂದ 20 ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ18.08.2025 ರಂದು ಮಧ್ಯಾಹ್ನ 12.20 ರಿಂದ 12.50 ರ ಅವಧಿಯಲ್ಲಿ ಆರೋಪಿತರು ತೋರಿಸಿದ ಆಡುವಳ್ಳಿ ಗ್ರಾಮದ ಸ.ನಂ.121/1 ರಲ್ಲಿರುವ ಚಿಕ್ಕಗ್ರಹಾರ ವಾಸಿ ಸಿ ಆರ್ ಅನಿಲ್ ಕುಮಾರ ರವರ ಬಾಬ್ತು ಜಮೀನಿನಲ್ಲಿರುವ ವಾಸದ ಮನೆಯಲ್ಲಿ ಚಾಸಾ 1 ರವರ ಸಮಕ್ಷಮ ನನ್ನ ಮತ್ತು ಚಾಸಾ 4 ರವರ ಪೊಲೀಸರು ಕಳ್ಳತನ ಮಾಡಿದ ಸ್ಥಳದ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಮನೆಯ ಬಾಗಿಲ ಬೀಗವನ್ನು ಒಡೆದು ಮನೆಯೊಳಗೆ ಪ್ರವೇಶ ಮಾಡಿ ಕಳ್ಳತನ ಮಾಡಿ ಸದರಿಯವರ ಮನೆಯಲ್ಲಿ ಇಟ್ಟಿದ್ದ ಒಂದು ಸೋಲಾರ್ ಚಾರ್ಜರ್ ಬ್ಯಾಟರಿ , ಒಂದು ಗ್ಯಾಸ್ ಸಿಲಿಂಡರ್, ಸ್ಟವ್ ಹಾಗೂ ಇಸ್ತ್ರಿ ಪೆಟ್ಟಿಗೆಯನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ನಮ್ಮ ಸಮಕ್ಷಮ ಒಂದು ಮರದ ಹಿಡಿ ಇರುವ ಕಬ್ಬಿಣದ ಸುತ್ತಿಗೆಯನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 1.35 ರಿಂದ 2.15 ರ ಅವಧಿಯಲ್ಲಿ ಆರೋಪಿತರು ತಾವು ಕಳ್ಳತನ ಮಾಡಿದ ವಸ್ತುಗಳನ್ನು ಮಾರಾಟ ಮಾಡಿದ್ದು , ಅವುಗಳನ್ನು ಆಡುವಳ್ಳಿ ಗ್ರಾಮದ ರಂಗಪ್ಪ ಗೌಡರ ವಾಸದ ಮನೆಯ ಜಗುಲಿಯಾಗಿದ್ದು, ಸದರಿಯವರು ಭಾನುಪ್ರಕಾಶ್ ರವರಿಗೆ ಕಳ್ಳತನ ಮಾಡಿದ ವಸ್ತುಗಳನ್ನು ತಂದು ಕೊಟ್ಟಿರುವುದಾಗಿ ಹಾಗೂ ಸದರಿ ಭಾನುಪ್ರಕಾಶ್ ಹಾಜರುಪಡಿಸಿದ ಒಂದು ಇಂಡಿಯನ್ ಕಂಪನಿಯ ಗ್ಯಾಸ್ ಸಿಲಿಂಡರ್,

ಸುಕುಮ್ ಪವರ್ ಸಿಸ್ಟಂ ನ ಸೋಲಾರ್ ಪ್ಯಾನೆಲ್ ಇವುಗಳನ್ನು ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಅಮಾನತುಪಡಿಸಿಕೊಂಡು ಹಾಗೂ ಉಳಿದ ವಸ್ತುಗಳನ್ನು ಆರೋಪಿ ಮಹೇಶ ಇವರು ತಮ್ಮ ಊರಾದ ಗಡಿಗೇಶ್ವರದಲ್ಲಿ ಇಟ್ಟಿದ್ದು , ಸದರಿಯವರ ಮನೆಯಲ್ಲಿ ಚಾರ್ಜರ್ ಬ್ಯಾಟರಿ, ಒಂದು ಗ್ಯಾಸ್ ಸ್ಟವ್ ಹಾಗೂ ಇಸ್ತ್ರಿ ಪೆಟ್ಟಿಗೆಯನ್ನು ಕೊಟ್ಟಿದ್ದ ಅವುಗಳನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡು ನಿಪಿ 13 ರಂತೆ ಅಮಾನತು ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಆ ಕಾಲಕ್ಕೆ ನಿಪಿ 14 ರಿಂದ 20 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಮು ಮಾ 1 ರಿಂದ 6 ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ 13 ರಂತೆ ಅಮಾನತು ಮಹಜರನ್ನು ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆ ಃ ಇಲ್ಲ ಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ